ಇದೆ. ಕೇವಲ ಕ್ಲಾಸ್ ರೂಮಿನಲ್ಲಿ ಕ್ಲಾಸನ್ನು ತೆಗೆದರೆ ಅದು ಸರಳ ಆಗುತ್ತದೆ. ಅದನ್ನು ಏಕೆ ವಿಚಾರ ಮಾಡಬಾರದು.

ಅಧ್ಯಕ್ಷರು : ಅದನ್ನು ವಿಚಾರ ಮಾಡುತ್ತಾರೆ.

ತೋಟಗಾರಿಕೆ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ

364 - ಶ್ರೀ ಗುರುಪಾದಪ್ಪ ನಾಗಾರ್ಜಪಲ್ಲಿ (ಔರಾದ್) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸಲು ಸರ್ಕಾರದ ಉದ್ದೇಶವಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಈ ನಿಗಮವನ್ನು ಯಾವ ವರ್ಷದಲ್ಲಿ ಸ್ಥಾಪಿಸಲಾಗುವುದು ಮತ್ತು ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ರಾಜ್ಯ ಸರ್ಕಾರ ವಿಶ್ವಬ್ಯಾಂಕು ಹಾಗೂ ವಿದೇಶ ಹಣಕಾಸಿನ ಸಂಸ್ಥೆಗಳಿಂದ ಎಂಟನೆ ಯೋಜನೆಯ ಅವಧಿಯಲ್ಲಿ ತೋಟಗಾರಿಕೆ ಕ್ಷೇತ್ರದ ಉತ್ಪಾದನೆಗೆ ಹೆಚ್ಚಿನ ಮಹತ್ವ ನೀಡುವ ಸಲುವಾಗಿ ಹಣಕಾಸು ನೆರವನ್ನು ಪಡೆಯಲು ರೂಪಿಸಿರುವ ಆರು ಯೋಜನೆಗಳು ಯಾವುವು?

ಈ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕಾ ಅಭಿವೃದ್ಧಿಗೆ ಸರ್ಕಾರದ 8ನೇ ಯೋಜನೆಯ ಅವಧಿಯಲ್ಲಿ ಯಾವುದಾದರೂ ಯೋಜನೆಯನ್ನು ರೂಪಿಸಲಾಗಿದೆಯೇ?

ಉ) ಹಾಗಿದ್ದಲ್ಲಿ ಅಂತಹ ಯೋಜನೆ ಯಾವುದು? (ಅದರ ಪೂರ್ಣ ವಿವರ ನೀಡುವುದು)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಕೆಳಕಂಡ ವಿಶೇಷ ಯೋಜನೆಗಳು ಮಾತ್ರ ಪರಿಶೀಲನೆಯಲ್ಲಿವೆ :

1) ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ
2) ತೆಂಗು ಅಭಿವೃದ್ಧಿ ಯೋಜನೆ
3) ಸಮಗ್ರ ಮಾವು ಅಭಿವೃದ್ಧಿ ಯೋಜನೆ
4) ಲಾಲ್‌ಬಾಗ್‌ನಲ್ಲಿ ಸಮಗ್ರ ಪುಷ್ಪಾಭಿವೃದ್ಧಿ ಯೋಜನೆ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮೊದಲನೆ ಪ್ರಶ್ನೆಯಲ್ಲಿ ರಾಜ್ಯದಲ್ಲಿ ತೋಟಗಾರಿಕೆ ಪ್ರತ್ಯೇಕ ನಿಗಮ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಎರಡನೆ ಪ್ರಶ್ನೆಗೆ ಉತ್ತರವಾಗಿ ಕೆಳಕಂಡ ವಿಶೇಷ ಯೋಜನೆಗಳು ಮಾತ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ ತೆಗೆದುಕೊಳ್ಳುತ್ತೇವೆ ಅಂದಾಗ ಒಂದು ನಿಗಮ ಪ್ರತ್ಯೇಕವಾಗಿ ಮಾಡಿದ್ದರೆ ಚೆನ್ನಾಗಿರುತ್ತೆದೆಂದು ಹೇಳುತ್ತೇನೆ. ಮೊದಲು ಪ್ರತ್ಯೇಕ ನಿಗಮ ಮಾಡುತ್ತೇವೆ ಎಂದು ಪತ್ರಿಕೆಗಳಲ್ಲಿ ಬಂದಿತ್ತು. ಅದು ನಿಜವೇ? ಈಗ ಏನಾದರೂ ಮಾಡುವುದಕ್ಕೆ ಸಾಧ್ಯವಿದ್ದರೆ ದಯವಿಟ್ಟು ಅದನ್ನು ಮಾಡಿದರೆ ಒಳ್ಳೆಯದು, ಇದು ಬಹಳ ಮಹತ್ವವಾದದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಧ್ಯದಲ್ಲಿ ಆ ಪ್ರಪೋಸಲ್ ಇಲ್ಲ. ಆದರೆ ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಬೇಕು. ಏಕೆಂದರೆ, ಇವೆಲ್ಲಾ

ಎಕಾನಾಮಿಕಲಿ ವೆಯಬಲ್ ಆಗಬೇಕಾದರೆ ಇದು ಮಾಡತಕ್ಕದ್ದು ಅವಶ್ಯಕ ಇದೆ ಎಂದು ಹೇಳಿದ್ದಾರೆ. ಅದು ನಮ್ಮ ಪರಿಶೀಲನೆಯಲ್ಲಿದೆ. ಸಧ್ಯಕ್ಕೆ ಈಗ ಕಾರ್ಪೊರೇಷನ್ ಅನ್ನು ಫಾರಂ ಮಾಡುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾಡುವಾಗ ಬೀದರ್ ಅನ್ನು ಗಮನದಲ್ಲಿಟ್ಟುಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಡುವಾಗ ನ್ಯಾಚುರಲಿ ಎಲ್ಲೆಲ್ಲಿ ವಯಬಲ್ ಇದೆ, ಅಲ್ಲೆಲ್ಲಾ ಈ ಸ್ಕೀಮ್ ಎಕ್ಸ್‌ಟೆಂಡ್ ಆಗುತ್ತದೆ.

ವಾಲೀಕಾರಿ ಹಾಗೂ ಇನಾಂ ಜಮೀನುಗಳನ್ನು ಸಕ್ರಮಗೊಳಿಸುವುದು.

1282 - ಶ್ರೀ ಮನೋಹರ, ಐನಾಪುರ (ಬಳ್ಳೊಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಲೀಕಾರಿ ಜಮೀನು ಹಾಗೂ ಇನಾಂ ಭೂಮಿಯನ್ನು ಖಾಯಗೊಳಿಸಲು ಸರ್ಕಾರವು ಉದ್ದೇಶಿಸಿದೆಯೇ?

ಆ) ಹಾಗಾದರೆ ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಕರ್ನಾಟಕ ಗ್ರಾಮ ಕಛೇರಿಗಳ ಇನಾಂ ರದ್ದಿಯಾತಿ ಕಾಯ್ದೆ 1961 ತಿದ್ದುಪಡಿ ಕಾಯ್ದೆ 1978ರ ನಿಯಮ 4 ಉಪ ನಿಯಮ (1) ರಂತೆ ಅಧಿಭೋಗದಾರಿಕೆ ಹಕ್ಕು-ದಾರಿಕೆಗಾಗಿ (ಮರು-ಮಂಜೂರಾತಿಗಾಗಿ) ಅರ್ಜಿ ಸಲ್ಲಿಸಲು 30-6-91 ರವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಕರಡು ಅಧಿಸೂಚನೆ ಹೊರಡಿಸಲಾಗಿದೆ

ಆ) ಮೇಲೆ ಹೇಳಿದಂತೆ

ಶ್ರೀ ಮನೋಹರ್ ಐನಾಪುರ್ : ಮಾನ್ಯ ಅದ್ಯಕ್ಷರೆ, ಹೆಚ್ಚಾಗಿ ಈ ಜಮೀನುಗಳನ್ನು ಹರಿಜನ ಗಿರಿಜನರಿಗೆ, ಹಿಂದುಳಿದ ವರ್ಗದವರಿಗೆ, ಬಡ ರೈತರಿಗೆ ನೀಡಲಾಗಿದ್ದು, ಸದರಿ ಜಮೀನಿನಿಂದ ಯಾವ ರೀತಿ ಸರ್ಕಾರದಿಂದ ಸಾಲ ಸೌಲಭ್ಯಗಳು ಸಿಗದೆ ತೊಂದರೆಯಾಗಿದೆ. ಈಗ ರೆಗ್ಯುಲರೈಸ್ ಮಾಡಿದ ನಂತರ ಡಾ : ಅಂಬೇಡ್ಕರ್‌ರವರ ಜನ್ಮ ಶತಾಬ್ದಿ ವರ್ಷವಾಗಿರುವುದರಿಂದ ಸರ್ಕಾರ ಈ ಬಡ ರೈತರಿಗೆ ವಿಶೇಷ ಸಾಲದ ಸೌಲಭ್ಯ ಕಲ್ಪಿಸುವ ವಿಚಾರ ಏನಾದರೂ ಮಾಡಿದ್ದೀರ ಎಂದು ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಈ ಒಂದು ಕಾನೂನಿಗೆ ತಿದ್ದುಪಡಿಯನ್ನು ಕೊಟ್ಟಿದ್ದೇವೆ. ಅಬ್ಜೆಕ್ಷನ್ ಕಾಲ್‌ಫರ್ ಮಾಡಿದ್ದೇವೆ. 15 ದಿವಸ ಆದಮೇಲೆ ಯಾವ್ಯಾವ ಅಬ್ಜೆಕ್ಷನ್ ಬಂದಿದೆ ಅದನ್ನು ನೋಡಿ ರೀಗ್ರಾಂಟ್ ಮಾಡತಕ್ಕದ್ದನ್ನು ಮಾಡುತ್ತೇವೆ. ಇನ್‌ಫೀರಿಯ ವಿಲೇಜ್ ಆಫೀಸರ್ಸ್ ಅಬಾಲಿಷನ್ ಆಕ್ಟ್‌ನ ಸೆಕ್ಷನ್ 4ರ ಕೆಳಗಡೆ ಗ್ರಾಂಟ್ ಈ ಜಮೀನುಗಳನ್ನು ಸಾವು ಮಾಡಬೇಕಾಗುತ್ತದೆ. ರೀಗ್ರಾಂಟ್ ಮಾಡಿದ ಮೇಲೆ they will get full Patta rights. ಆಮೇಲೆ ಪಿಎಲ್‌ಡಿ ಬ್ಯಾಂಕ್‌ನಿಂದ ಸಾಲ ಅಥವಾ ಬೇರೆ ಎಲ್ಲಾ ಸವಲತ್ತುಗಳನ್ನು ಅದರಿಂದ ಪಡೆಯಬಹುದು.

ಶ್ರೀ ಮನೋಹರ್ ಐನಾಪುರ್ : ವಿಶೇಷ ಹಣವನ್ನು ಏನಾದರೂ ಒದಗಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಮಾಜ ಕಲ್ಯಾಣ ಇಲಾಖೆ ಏನಾದರೂ ಕಾರ್ಯಕ್ರಮ ಹಾಕಿಕೊಂಡರೆ ಖಂಡಿತವಾಗಿ ಮಾಡುತ್ತೇವೆ. ನಾವು ಕೊಡತಕ್ಕದ್ದನ್ನು ರೀಗ್ರಾಂಟ್ ಮಾಡಿಕೊಡುತ್ತೇವೆ. ಉಳಿದಿದ್ದನ್ನು The Social Welfare Department will take up developmental activities.